# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಅಧೀಕ್ಷಕ ಅಭಿಯಂತರರು(ವಿ)
ಕಾ ಮತ್ತು ಪಾ ವೃತ್ತ, ಕೇಶ್ವಾಪೂರ, ಹುಬ್ಬಳ್ಳಿ-23
Tel: 0836-2364144, Fax: 0836-2366184

**Superintending Engineer(Ele)**
**O & M Circle, Keshwapur, Hubballi-23**
**E-mail ID: seehbl.hescom@gmail.com**

**Corporate Identity Number** (CIN) : U31401KA2002SGC030437


## ಗ್ರಾಹಕರ ಕುಂದುಕೊರತೆಗಳ ನಿವಾರಣೆ ವೇದಿಕೆ

ಕಾರ್ಯ ಮತ್ತು ಪಾಲನೆ ವೃತ್ತ, ಹೆಸ್ಕಾಂ, ಹುಬ್ಬಳ್ಳಿ, ಧಾರವಾಡ ಜಿಲ್ಲೆ

ಪ್ರಕರಣ ಸಂಖ್ಯೆ:232

ವೇದಿಕೆಯ ಸದಸ್ಯರು:

ಶ್ರೀ **ಎಮ್. ಆರ್. ಶಾನಭಾಗ,** ಅಧೀಕ್ಷಕ ಇಂಜಿನೀಯರ(ವಿ)ಕಾಮತ್ತು ಪಾ ವೃತ್ತ ಹೆಸ್ಕಾಂ ಹುಬ್ಬಳ್ಳಿ ಹಾಗೂ ವೇದಿಕೆಯ ಅಧ್ಯಕ್ಷರು.

ಶ್ರೀ **ರಾಮಪ್ಪ. ಎನ್. ಎನ್,** ಉಪಲೆಕ್ಕ ನಿಯಂತ್ರಣಾಧಿಕಾರಿ ಕಾ ಮತ್ತು ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ ಹಾಗೂ ವೇದಿಕೆಯ ಸದಸ್ಯರು.

ಶ್ರೀಮತಿ, **ಲೀಲಾ ಆರ್ ಹಿರೇಮಠ,** ವಕೀಲರು, ಆಯೋಗದಿಂದ ನಿಯೋಜಿಸಲಾದ ಸದಸ್ಯರು.

ಶ್ರೀ ಮಲ್ಲಿಕಾರ್ಜುನ.ದೋ.ರೊಟ್ಟಿಗವಾಡ,
(R R No : DHC-36443)
ಹೊಟೇಲ್ ಬೊಟಾನಿಕಲ್ ಗಾರ್ಡನ್,
ನೀರ್‌ಸಾಗರ ಕ್ರಾಸ್, ದುಮ್ಮವಾಡ, ತಾ||ಕಲಘಟಗಿ, .............**ದೂರುದಾರರು.**

**ವಿರುದ್ಧ,**

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)
ಕಾ ಮತ್ತು ಪಾ ಉಪ ವಿಭಾಗ,
ಹೆಸ್ಕಾಂ, ಕಲಘಟಗಿ. ..................**ಪ್ರತಿವಾದಿಗಳು.**

**ಪೀಠಿಕೆ:**

1. ಸ್ಥಾವರ ಸಂಖ್ಯೆ: DHC-36443 ನೇದ್ದ ಸ್ಥಾವರವು ಎಲ್.ಟಿ.-3 ಜಕಾತಿಯಡಿಯಲ್ಲಿ ಶ್ರೀ ಮಲ್ಲಿಕಾರ್ಜುನ. ದೋ.ರೊಟ್ಟಿಗವಾಡ ಇವರ ಹೆಸರಿನಲ್ಲಿ ಸಂಪರ್ಕಿತಗೊಂಡಿರುತ್ತದೆ. ಸದರ ಸ್ಥಾವರವು ಕಲಘಟಗಿ ಉಪ ವಿಭಾಗದ ವ್ಯಾಪ್ತಿಗೆ ಬರುತ್ತದೆ. ದಿನಾಂಕ:31.05.2017 ರಂದು ಸಾಯಂಕಾಲ 6-30 ರಿಂದ 8-30 ಒಳಗೆ ವಿದ್ಯುತ್ ಅವಗಡ ಸಂಭವಿಸಿ, ತಮ್ಮ ಆವರಣದಲ್ಲಿರುವ ರೇಫ್ರಿಜರೇಟರ್, ಫ್ರೀಡ್ಜ್, ಎಲ್.ಇ.ಡಿ ಸ್ಟೀಟ್ ಲೈಟ್, ಎಲ್.ಇ.ಡಿ. ಸಿಲ್ಲಿಂಗ್ ಲೈಟ್, ಎಪ್ಸಾನ್ ಮೇಕ್ ಪ್ರೋಜಕ್ಟರ್ ಉಪಕರಣಗಳು ಸುಟ್ಟು ಹೋಗಿ ರೂ. 1,60,400/-ಗಳು ನಷ್ಟವಾಗಿದೆ ಎಂದು ಸದರಿ ವಿದ್ಯುತ್ ಅವಗಡದಿಂದ ಆಗಿರುವ ನಷ್ಟವನ್ನು ಭರಿಸಿಕೊಡುವಂತೆ ದಿನಾಂಕ:19-01-2018 ರಂದು ಗ್ರಾಹಕರ ಕುಂದು ಕೊರತೆಗಳ ನಿವಾರಣೆ ವೇದಿಕಗೆ ವಿನಂತಿಸಿಕೊಂಡಿರುತ್ತಾರೆ..
2. ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್(ವಿ),ಕಾ ಮತ್ತು ಪಾ ಉಪವಿಭಾಗ, ಹೆಸ್ಕಾಂ, ಕಲಘಟಗಿರವರು ಉಪವಿಭಾಗದ ದುಮ್ಮವಾಡ ಗ್ರಾಮ ಪಂಚಾಯತ ವ್ಯಾಪ್ತಿಯ ಸ್ಥಾವರ ಸಂಖ್ಯೆ: DHC-36443/DHAEH-29192 ಬಗ್ಗೆ ಗ್ರಾಹಕರು ಕೇಳಿದ ಮಾಹಿತಿಗನುಗುಣವಾಗಿ ರೂ 1,60,400/- ಗಳ ಮೌಲ್ಯದ ವಸ್ತುಗಳು ಹಾಳಾಗಿವೆ ಎಂದು ತಿಳಿಸಿರುತ್ತಾರೆ. ಆದರೆ ಗ್ರಾಹಕರು ಸದರಿ ಅವಗಡ ಆದ ತಕ್ಷಣ ನನಗೆ ಆಗಲೀ ಅಥವಾ ಶಾಖಾಧಿಕಾರಿಗಳಿಗೆ ಆಗಲಿ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲಾ. ಅಲ್ಲದೆ ಘಟನೆ ಬಗ್ಗೆ ವಿದ್ಯುತ್ ಇನಸ್ಪರೇಟ್ ಆಗಲೀ, ಅಥವಾ ಪೊಲೀಸ್ ಇಲಾಖೆಗೆ ಆಗಲಿ ಮಾಹಿತಿಯನ್ನು ತಿಳಿಸಿರುವುದಿಲ್ಲಾ. ಮುಖ್ಯವಾಗಿ ಇದುವರೆಗೂ ಹಾಳಾದ ವಸ್ತುಗಳನ್ನು ಕೂಡಾ ತೋರಿಸಿರುವುದಿಲ್ಲಾ ಎಂದು ವೇದಿಕಗೆ ತಿಳಿಸಿರುತ್ತಾರೆ.

.....2

2. ಸದರ ಪ್ರಕರಣವನ್ನು ದಿನಾಂಕ: 13-07-2018, 18-08-2018 ಮತ್ತು 29-09-2018 ರಂದು ವಿಚಾರಣೆಯನ್ನು ನಡೆಸಲಾಯಿತು. ನಿಗಮದ ಪರವಾಗಿ ಶ್ರೀ ಹರ್ಷಾ ಬೆಂತೂರ, ಕಾ ಮತ್ತು ಪಾ ಉಪ ವಿಭಾಗ, ಹೆಸ್ಕಾಂ, ಕಲಘಟಗಿ ಹಾಗೂ ಶ್ರೀ ಮಲ್ಲಿಕಾರ್ಜುನ ಡಿ ರೊಟ್ಟಿಗವಾಡ, ಗ್ರಾಹಕರು ಹಾಜರಿದ್ದರು.

**ಶ್ರೀ ಮಲ್ಲಿಕಾರ್ಜುನ.ದೋ.ರೊಟ್ಟಿಗವಾಡ, ಗ್ರಾಹಕರು ಇವರು (ಎ) ಫಾರ್ಮನೋದಿಗೆ ಸಲ್ಲಿಸಿದ ಲಿಖಿತ ಹೇಳಿಕೆ**

ವಿಷಯ: ವಿದ್ಯುತ್ ಅವಗಡದಿಂದ ಹಾಳಾಗಿರುವ ನಷ್ಟವನ್ನು ಬರೆಸಿಕೊಡುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಕಲಘಟಗಿ ತಾಲೂಕಿನ ದುಮ್ಮವಾಡ ಗ್ರಾಮದ ವ್ಯಾಪ್ತಿಯಲ್ಲಿ ಬರುವ ನೀರ್ ಸಾಗರ್ ಕ್ರಾಸ್ ಹತ್ತಿರ ಇರುವ ಹೊಟೇಲ್ ಬೊಟಾನಿಕಲ್ ಗಾರ್ಡನ್ ಇದರ ವಿದ್ಯುತ್ ಬಳಕೆದಾರರ ಆರ್.ಆರ್.ಸಂಖ್ಯೆ: DHC-36443 ದಿನಾಂಕ:31.05.2017 ರಂದು ಎಪ್ರೀಲ್ ತಿಂಗಳಾದ ವಿದ್ಯುತ್ ಬಿಲ್ ಬಾಕಿ ಇದ್ದದರಿಂದ ವಿದ್ಯುತ್ ಕಡಿತಗೊಳಿಸಲು ಲೈನ್‌ಮಾನಗಳು ಮುಂದಾದರು. ಆಗ ನಾನು ಈ ಮೊದಲೇ ಅವರಿಗೆ ನಾನು ಚೆಕ್ ಅನ್ನು ನೀಡಿದ್ದೆ ದಿನಾಂಕ:31.05.2017 ರಂದು ಸಾಯಂಕಾಲ 5.30 ರ ಸುಮಾರಿಗೆ ನಮ್ಮ ಚೆಕ್ ಸ್ವೀಕರಿಸಲು ನಿರಾಕರಿಸಿದ್ದಾರೆ. ಆದ್ದರಿಂದ ಈ ಚೆಕ್ ಅನ್ನು ವಾಪಸ್ ತಗೊಂಡು ನಗದು ಹಣವನ್ನು ಕೊಡಬೇಕೆಂದು ನನ್ನ ಹತ್ತಿರ ಕೇಳಿದ್ರು ಅವಾಗ ನಾನು ಈ ಸಮಯದಲ್ಲಿ ಬಂದು ನೀವು ಹಣ ಕೇಳಿದ್ರೆ ಸುಮಾರು 23.00 ಚಿಲ್ಲರೆ ಇದೆ ಅಷ್ಟೊಂದು ಹಣ ನನ್ನ ಹತ್ತಿರ ಇಲ್ಲ. ಆದ್ದರಿಂದ ನಾನು ನಾಳೆ ದಿವಸ ಬ್ಯಾಂಕಿಗೆ ಹೋಗಿ ಹಣ ವಿಡ್ರಾಲ್ ಮಾಡಿಕೊಡುತ್ತೇನೆ. ದಯವಿಟ್ಟು ವಿದ್ಯುತ್ ಕಡಿತಗೊಳಿಸಬೇಡಿ ಅಂತಾ ಹೇಳಿದೆ ಅವರು ನಮ್ಮ ಹತ್ರ ಏನು ಇಲ್ಲ ನಮ್ಮ ಸಾಹೇಬ್ರ ಹತ್ರ ಕೇಳಿ ಅಂತಾ ಹೇಳಿದರು. ಆಗ ನಾನು ನಿಮ್ಮ ಸಾಹೇಬ್ರ ದೂರವಾಣಿ ಸಂಖ್ಯೆ ಕೊಡ್ರಿ ಅಂತಾ ಹೇಳಿದೆ. ಆಗ ಅವರು ಅವರ ಸಾಹೇಬ್ರ ದೂರವಾಣಿ ಸಂಖ್ಯೆ ಕೊಟ್ರು. ಆ ದೂರವಾಣಿ ಸಂಖ್ಯೆ-9480881351 ಇವರ ಹೆಸರು ಬಾಬಾಜಾನ್ ಅಂತಾ ಸೆಕ್ಷನ್ ಆಫೀಸರ್ ಅವರ ಜೊತೆ ನಾನು ಸರ್ 5.30 ಆಗಿದೆ ಈಗ ಇಷ್ಟೊತ್ತಿನಲ್ಲಿ ಹಣ ಕೊಡು ಅಂತಂದ್ರೆ ನಾನು ಎಲ್ಲಿಂದ ಕೊಡ್ಲಿ ಅದಕ್ಕಾಗಿ ನಾನು ನಾಳೆ 11.00 ಗಂಟೆ ಅಷ್ಟೊತ್ತಿಗೆ ನಿಮ್ಮ ಪೂರ್ತಿ ಬಿಲ್ಲನ್ನು ನಾನು ಸಂದಾಯ ಮಾಡುತ್ತೇನೆ ಅಂತ ನಾನು ಹೇಳಿದೆ ಅದಕ್ಕೆ ಅವರು ಇಲ್ಲಾ ರೀ ನಮಗೆ ಮೇಲಿಂದ ಒತ್ತಡವಿದೆ. ನೀವು ಬಿಲ್ ಪೇ ಮಾಡ್ಲೆಬೇಕು ಅಂತಾ ಅವರು ಹೇಳಿದ್ರು ಅದಕ್ಕೆ ನಾನು ಸರ್ ನಾನು ಎಂಟು ದಿವಸದ ಹಿಂದೆ ಚೆಕ್ ಕೊಟ್ಟಿದ್ದೆ ಈಗ ಸಡನ್ನಾಗಿ ಹಣ ಕೊಡು ಅಂದ್ರೆ ನಾನು ಎಲ್ಲಿಂದ ಕೊಡಬೇಕು ಅಂತಾ ಹೇಳಿದೆ ಅದಕ್ಕೆ ಅವರು ಆಯ್ತು ಅಂತ ಹೇಳಿದ್ರು ಆಗ ನಾನು ನಿಮ್ಮ ಲೈನಮನಗಳಿಗೆ ಹೇಳ್ರಿ ಸರ್ ಅಂತಾ ಹೇಳಿದೆ ನನ್ನ ಕೈಯಲ್ಲಿದ್ದ ಫೋನ್‌ನ್ನು ಲೈನಮನ್ ಹತ್ರ ಕೊಟ್ಟೆ ಆವಾಗ ಅವ್ರು ದೂರವಾಣಿಯಲ್ಲಿ ಏನೊ ಹೇಳಿದ್ರುಗೊತ್ತಿಲ್ಲ. ಲೈನಮ್ಯಾಗಳು ಆಗ ಅವರು ಅಲ್ಲಿಂದ ಹೊರು ಹೋದ್ರು ಅವರು ಹೋದ ಸಮಯದಿಂದ ಅರ್ಧ ಗಂಟೆಯೊಳಗಡೆ ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು.

ಆದರೆ ಪೂರಪ್ರಮಾಣದ ವಿದ್ಯುತ್ ಸಂಪರ್ಕ ಪೂರಕಡಿತಗೊಂಡಿರಲಿಲ್ಲ. ಅವಾಗ ನಾನು ಲೈನ್ ಸಿಂಗಲ್ ಆಗಿದೆ ಅಂತ ತಿಳಿದುಕೊಂಡಿದ್ದೆ. ಅವಾಗವಾಗ ಲೈನ್ ಬರೋದು ಹೋಗೊದು ಬರೋದು ಹೋಗೋದು ಮಾಡ್ತಾಯಿತ್ತು. ಲೈಟಗಳು ಪಟ್‌ಪಟ್ ಅಂತ ಶಬ್ದ ಬಂದ್ವು ಸ್ವಲ್ಪ ಹೊತ್ತಾದ ಮೇಲೆ ಫ್ರೀಜ್‌ಗಳು ಹಾಗೂ ಒಂದು ಟಿವಿ, ಒಂದು ಪ್ರೊಜೆಕ್ಟರ್ ಇವು ಕೂಡಾ ಶಬ್ದ ಬಂದ್ವು ಇದಾದ ಮೇಲೆ ನಾವು ಯಾವುದನ್ನು ಆನ್ ಮಾಡಲಿಲ್ಲ. ಮಾರನೇ ದಿನ ಲೈನಮನ್‌ಗೆ ಫೋನ್ ಹಚ್ಚಿ ಕೇಳಿದಾಗ ನಮ್ಮ ಕರೆಂಟ್ ಏನಾಗಿದೆ ಅಂತಾ ಕೇಳಿದೆ. ಅವಾಗ ಅವರು ನಿಮ್ಮ ವಿದ್ಯುತ್ ಬಿಲ್ ಪಾವತಿ ಮಾಡಿ ಅವಾಗ ಸರಿ ಆಗುತ್ತೆ ಅಂತಾ ಹೇಳಿದ್ರು ಅವಾಗ ನಾನು ಅವರಿಗೆ ಹಣ ತುಂಬುದಕ್ಕೂ ವಿದ್ಯುತ್ ಸರಿಪಡಿಸೊದಕ್ಕೂ ಏನ್ರಿ ಸಂಬಂಧ ಅಂತ ಕೇಳಿದೆ ಅದಕ್ಕೆ ಅವರು ನಿಮ್ಮ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿದೆ. ಆದ್ದರಿಂದ ನೀವು ಹಣ ಕಟ್ಲೇಬೇಕು ಅಂತ ಹೇಳಿದ್ರು ಆಗ ನಾನು ಬ್ಯಾಂಕಿನಿಂದ ಹಣ ವಿಡ್ರಾಲ್ ಮಾಡಿಕೊಂಡು ಬಂದು ಹಣವನ್ನು ತುಂಬಿದೆ. ಆಗ ಅವರು ಪುನ: ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಟ್ಟರು. ವಿದ್ಯುತ್ ಸಂಪರ್ಕ ಬಂದ ಮೇಲೆ ಫ್ರೀಜ್‌ನ್ನು ಚಾಲೂ ಮಾಡಲು ಹೋದೆವು ಆಗ ಫ್ರೀಜ್ ಚಾಲೂ ಆಗಲಿಲ್ಲ. ಆಗ ನಾನು ಗಾಬರಿಗೊಂಡು ಲೈಟ್ಸ್ ಮತ್ತು ಟಿವಿ, ಪ್ರೋಜೆಕ್ಟರನ್ನು ಆನ್ ಮಾಡಿ ನೋಡಿದೆವು. ಕೆಲವು ಲೈಟಗಳು, ಒಂದು ಟಿವಿ, ಎರಡು ಫ್ರೀಜ್, ಪ್ರೊಜೆಕ್ಟರ್, ಎರಡು ಸ್ಯಾಟಲೈಟ್ ಹಾಳಾಗಿರುವುದು ಕಂಡು ಬಂತು. ಆಗ ನಾನು ತಕ್ಷಣ ಸೆಕ್ಷನ್ ಆಫೀಸರಗಳಾದ ಬಾಬಾಜೇನ್ ಮತ್ತು ನಾಯ್ಕರ ಸಾಹೇಬ್ರು ಅವರನ್ನು ಕರೆದು

.....3

ತೋರಿಸಿದೆ. ಆಗ ಅವರು ನೋಡಿವ್ರಿ ಚೆಕ್ ಮಾಡೋನು ಅಂತಾ ಹೇಳಿದ್ರು ಹೇಳಿ ಅವನ್ನೆಲ್ಲವನ್ನು ನೋಡಿ ಅಲ್ಲಿಂದ ಹೋರಟೊದ್ರು. ನಾನು ಆರನೇ ತಾರೀಖುವರೆಗೂ ಇವತ್ತು, ನಾಳೆ ಬರುತ್ತಾರೆಂದು ನೋಡಿದೆ ಕಡೆಗೂ ಬರ್ಲೆಯಿಲ್ಲಾ. ಆಗ ಕಲಘಟಗಿ ಆಫೀಸಿಗೆ ಸಂಪರ್ಕ ಮಾಡಿದೆ ಕಲಘಟಗಿ ಆಫೀಸಿನಲ್ಲಿ ಯಾರು ಇರಲಿಲ್ಲ.

ಕಾರಣ ಈ ಮೊದಲು ರೈತಾಪಿ ಜನರು ತಮ್ಮ ಕಬ್ಬಿನ ಹೊಲದಲ್ಲಿ ಲೈನ್ ಬಿದ್ದು, ಆ ಲೈನ್ ದುರಂತದಿಂದ ರೈತರು ಮೃತಪಟ್ಟಿದ್ದರು, ಆಕ್ರೋಶಗೊಂಡ ರೈತರು ಆಫೀಸರಗಳ ಮೇಲೆ ಹಲ್ಲೇ ಮಾಡಿದ್ದರು. ಆ ಕಾರಣದಿಂದ ಆಫೀಸನಲ್ಲಿ ಯಾರು ಇರಲಿಲ್ಲ. ನನಗೆ ದಾರಿ ತೋಚದೆ ಮಾನ್ಯ ಕಾರ್ಯನಿರ್ವಾಹಕ ಇಂಜನೀಯರ್(ವಿ), ಹೆಸ್ಕಾಂ, ಗ್ರಾಮೀಣ ವಿಭಾಗ, ಧಾರವಾಡ ಅವರಿಗೆ ದಿನಾಂಕ:08.06.2017 ರಂದು ಪತ್ರದ ಮುಖಾಂತರ ತಿಳಿಸಿದೆ. ಅವರಿಗೆ ತಿಳಿಸಿದ ವಿವರಗಳು ಅನುಬಂಧ 1 ರಿಂದ 4 ರಲ್ಲಿ ಇರುತ್ತದೆ. ಅದಕ್ಕೆ ಅವರು ಪ್ರತಿ ಉತ್ತರವಾಗಿ 02.08.2017 ರಂದು ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್(ವಿ), ಹುವಿಸಕಂನಿ, ಕಾ & ಪಾ ಉಪವಿಭಾಗ, ಕಲಘಟಗಿ ಇವರಿಗೆ ಏನಾಗಿದೆ ನೋಡಿಕೊಂಡು ನಿಯಮಾನುಸಾರ ಕ್ರಮ ಕೈಗೊಂಡು ಸಂಬಂಧಪಟ್ಟವರಿಗೆ ಮಾಹಿತಿ ಒದಗಿಸಿ ತಮ್ಮ ಕಛೇರಿಗೆ ವರದಿ ಸಲ್ಲಿಸಲು ಸೂಚಿಸಿದರು. ಇದರ ವಿವರ ಅನುಬಂಧ 5 ರಲ್ಲಿ ಇರುತ್ತದೆ. ದಿನಾಂಕ:14.09.2017 ರವರೆಗೂ ನಾನು ಕಾದು ನೋಡಿದೆ.ನನ್ನನ್ನು ಯಾರು ಸಂಪರ್ಕ ಮಾಡಲು ಪ್ರಯತ್ನ ಮಾಡಲಿಲ್ಲ. ಮತ್ತೆ ನಾನು ಅದೇ ದಿನ ಮಾನ್ಯ ಕಾರ್ಯನಿರ್ವಾಹಕ ಇಂಜನೀಯರ್(ವಿ), ಹೆಸ್ಕಾಂ, ಗ್ರಾಮೀಣ ವಿಭಾಗ, ಧಾರವಾಡ ಇವರಿಗೆ ಮತ್ತೊಂದು ಪತ್ರ ಬರೆದೆ ಆ ಪತ್ರದ ವಿವರ ಅನುಬಂಧ-6 ಮತ್ತು 7 ರಲ್ಲಿ ಇರುತ್ತದೆ. ಮತ್ತೆ ಮೂರು ತಿಂಗಳು ಕಾದು ನೋಡಿದೆ. ನನ್ನನ್ನು ಸಂಪರ್ಕ ಮಾಡಲು ಯಾರು ಬರಲಿಲ್ಲ. ನನಗೆ ದಾರಿ ತೋಚದೆ ಪುನ: ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್(ವಿ), ಹುವಿಸಕಂನಿ, ಕಾ & ಪಾ ಉಪವಿಭಾಗ, ಕಲಘಟಗಿ ಇವರಿಗೆ ದಿನಾಂಕ:08.01.2018 ರಂದು ಸಂಪರ್ಕ ಮಾಡಲು ಹೋದೆ ಅವರು ಸಿಗಲಿಲ್ಲ. ಪುನ: ದಿನಾಂಕ:16.01.2018 ರಂದು ಸಂಪರ್ಕ ಮಾಡಿ ಪತ್ರದ ಮುಂಖಾಂತರ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಹೋಗಲು ಅನುಮತಿ ಕೇಳಿದೆ ಅದಕ್ಕೂ ಕೂಡಾ ಅವರು ಏನು ಹೇಳಲಿಲ್ಲ. ಆ ಪತ್ರದ ವಿವರ ಅನುಬಂಧ 9 ರಲ್ಲಿ ಇರುತ್ತದೆ. ನಾನು ಅದೇ ದಿನ ನಾವು ಬಳಸಿದಂತಹ ವಿದ್ಯುತ್ತಿನ ಮಾಹಿತಿ ಕೊಡ್ರಿ ಅಂತಾ ಪತ್ರದ ಮುಖಾಂತರ ತಿಳಿಸಿದೆ. ಪತ್ರದ ವಿವರ ಅನುಬಂಧ-10 ರಲ್ಲಿ ಇರುತ್ತದೆ. ಅದಕ್ಕೆ ಅವರು ನಾವು ಬಳಸಿದಂತಹ ವಿದ್ಯುತ್ ಮಾಹಿತಿಯನ್ನು ನನಗೆ ಪತ್ರದ ಮುಖಾಂತರ ಪೂರೈಸಿದರು. ಆ ಪತ್ರದ ವಿವರ ಅನುಬಂಧ 11 ರಲ್ಲಿ ಇರುತ್ತದೆ. ನನಗೆ ಬೇಸರದ ಸಂಗತಿ ಏನೆಂದರೆ ಅನುಬಂಧ-11 ರಲ್ಲಿ ನೋಡಿ ನಿಮಗೆ ಗೊತ್ತಾಗತ್ತೆ ಡಿಸೆಂಬರ್-2016 ರನೇಯ ಮೊದಲನೆಯ ಬಿಲ್ಲು 0 ಇರುತ್ತದೆ. 2 ನೇಯ ಬಿಲ್ಲು 0 ಇರುತ್ತದೆ. 3 ನೇಯ ಬಿಲ್ಲು 400 ಯುನಿಟ ಬಳಕೆ ಮಾಡಿದ್ರಿ ಅಂತ ಬಿಲ್ ಕೊಡ್ತಾರೆ ಅದನ್ನು ಬರಣಾ ಮಾಡಿದ್ದೇನೆ. 4 ನೇಯ ಬಿಲ್ಲು 600 ಯುನಿಟ್ ಬಳಕೆ ಮಾಡಿದ್ರಿ ಅಂತ ಬಿಲ್ ಕೊಡ್ತಾರೆ. ಅದನ್ನು ಕೂಡಾ ನಾನು ಬರನಾ ಮಾಡಿದ್ದೇನೆ. 5 ನೇಯ ಬಿಲ್ಲು 1000 ಯುನಿಟ್ ಬಳಕೆ ಮಾಡಿದ್ರಿ ಅಂತ ಕೊಡ್ತಾರೆ ಅದನ್ನು ಕೂಡಾ ನಾನು ಬರನಾ ಮಾಡಿದ್ದೇನೆ.

A) 7ನೇಯ ಬಿಲ್ಲು 2000 ಯುನಿಟ್ ಬಳಕೆ ಮಾಡಿದ್ರಿ ಅಂತಾ ಕೊಡ್ತಾರೆ ಅದನ್ನು ಕೂಡಾ ಬರನಾ ಮಾಡಿದ್ದೇನೆ. 8 ನೇಯ ಬಿಲ್ಲು 2202 ಯುನಿಟ್ ಬಳಕೆ ಮಾಡಿದ್ರಿ ಅಂತಾ ಕೊಡ್ತಾರೆ. ಆಗ ನಾನು ಚೆಕ್ ನೀಡಿದ್ದೆ ಆ ಚೆಕ್ಕನ್ನು ವಾಪಸ್ ದಿನಾಂಕ:31.05.2017 ರಂದು ಸಾಯಂಕಾಲ 5.30 ಸುಮಾರಿಗೆ ಕೊಡಲು ಬರುತ್ತಾರೆ. ನಡೆದಂತಹ ವಿವರಗಳನ್ನು ಈ ಹಿಂದೆ ಬರೆದಿದ್ದೇನೆ, ಆದರೆ ನಾವು ಬಳಕೆ ಮಾಡುವಂತಹ ವಿದ್ಯುತನ್ನು ಪ್ರತಿ ತಿಂಗಳು 400, 600, 1000, 2000 ಹೇಗೆ ಸರಿಯಾಗಿ ಬಳಕೆ ಮಾಡಲು ಸಾಧ್ಯ ಇದೆಯಾ ನಮಗೆ ಯಾರೋ ಬಳಕೆ ಮಾಡಿದಂತಹ ಮೀಟರನ್ನು ಹಾಕಿ ಆ ಯುನಿಟಗಳನ್ನು ನಮ್ಮ ಲೆಕ್ಕದಲ್ಲಿ ವಸೂಲಿ ಮಾಡಿದ್ದಾರೆ. ಆದ ಕಾರಣ ದಯಮಾಡಿ ಸಂಪೂರ್ಣ ಮಾಹಿತಿಯನ್ನು ಪರಿಗಣಿಸಿ ನನಗೆ ನ್ಯಾಯ ಒದಗಿಸಿ ಕೊಡಬೇಕೆಂದು ಮತ್ತು ಹಾಳಾಗಿ ಹೋಗಿರುವ ವಸ್ತುಗಳನ್ನು ಬರೆಸಿಕೊಡಬೇಕೆಂದು ಹಾಗೂ ನನ್ನ ಹೊಟೇಲ್ 7 ಅಥವಾ 8 ದಿನ ಬಂದ್ ಮಾಡಿದ್ದು, ಬಂದಿನಿಂದ ಆಗಿರುವ ನಷ್ಟವನ್ನು ಬರೆಸಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯರೇ ನಾನು ಕೇಳಿಕೊಳ್ಳುವುದಿಷ್ಟೇ ನನಗೆ ಆಗಿರುವ ನಷ್ಟ ಅಂದಾಜು ಎರೆಡೂವರೆ ಲಕ್ಷದಿಂದ 3 ಲಕ್ಷದವರೆಗೆ ಆಗಿರುತ್ತದೆ. ಅದರ ವಿವರ ನನ್ನ ಹೊಟೇಲನಲ್ಲಿ ಒಟ್ಟು ಕಾರ್ಮಿಕರು 12 ಜನ ಇಬ್ಬರು ಅಡಿಗೆಯ ಭಟ್ಟರು ಒಬ್ಬರಿಗೆ ತಲಾ 500 ರೂಪಾಯಿ ಒಬ್ಬ ಕಿಚನ್ ಹೆಲ್ಪರ್ 350 ರೂಪಾಯಿ ಮೂರು ಜನ

.....4

ವೇಟರ್ ತಲಾ ಒಬ್ಬರಿಗೆ 300 ರೂಪಾಯಿ ಕ್ಲಿನಿಂಗ್ ಮಾಡುವರು 3 ಜನ ತಲಾ ಒಬ್ಬರಿಗೆ 200 ರೂಪಾಯಿ ಮೊರೆ ತೊಳೆಯವರು ಒಬ್ಬರು ಇವರಿಗೆ 200 ರೂಪಾಯಿ ಒಬ್ಬರು ಕ್ಯಾಶರ ಇವರಿಗೆ 400 ರೂಪಾಯಿ ಒಬ್ಬರು ಮ್ಯಾನೇಜರ್ ಇವರಿಗೆ 500 ರೂಪಾಯಿ ಒಟ್ಟು ಪ್ರತಿ ದಿನ ಸಂಬಳ 3950 ರೂಪಾಯಿ ಅದರಂತೆ 8 ದಿನಕ್ಕೆ 31,600 ರೂಪಾಯಿ ಅವರ ಊಟದ ಖರ್ಚು 8 ದಿನಕ್ಕೆ 12,000 ರೂಪಾಯಿ ಫ್ರೀಜನಲ್ಲಿ ಹಾಳಾಗಿ ಹೋಗಿರುವ ವಸ್ತುಗಳ ವಿವರ 9 ಕೆಜಿ ಮಟನ್ ಅದರ ಬೆಲೆ 3780 ರೂಪಾಯಿ, 15 ಕೆಜಿ ಚಿಕನ್ ಬೆಲೆ 4350 ರೂ, ತರಕಾರಿ 950 ರೂ, ಗ್ರೀನ್‌ಫಿಸ್ 780 ರೂ, ಹಾಲು 140 ರೂ ಇಷ್ಟು ಫ್ರೀಜ್‌ನಲ್ಲಿರುವ ವಸ್ತು ಹಾಳಾಗಿರುತ್ತದೆ. ನನ್ನ ಹೊಟೇಲ್‌ನಿಂದ ಪ್ರತಿದಿನ ನನಗೆ ಬರತಕ್ಕಂತಹ ಆದಾಯ 1500 ರಿಂದ 2000 ರವರೆಗೆ ಬರೆ 1500 ರೂಪಾಯಿ ---------- 12000 ಆದಾಯ ಹೊಯ್ತು ಅದಲ್ಲದೇನೆ ಇನ್ನು ಅನೇಕ ಸಣ್ಣ ಪುಟ್ಟ ವಸ್ತುಗಳು ಕೂಡಾ ಹಾಳಾಗಿದ್ದಾವೆ. ನನಗೆ ಯಾವ ರೀತಿ ತೊಂದರೆ ಆಯ್ತು ಅಂದ್ರೆ 8 ದಿನ ಹೊಟೇಲ್ ಬಂದ್ ಇದ್ದಿದರಿಂದ ಒಂದೂವರೆ ತಿಂಗಳು ಸರಿಯಾಗಿ ಗ್ರಾಹಕರು ಬರಲೆಇಲ್ಲ. ಏಕೆಂದರೆ ಹೊಟೇಲ್ ಬಂದ್ ಇರಬಹುದನ್ಕೊಂಡು ಬರ್ಲೇಯಿಲ್ಲ. ಇಲ್ಲೂ ಕೂಡ ನನಗೆ ಸುಮಾರು 25000 ದಷ್ಟು ನಷ್ಟವಾಗಿದೆ. ಮಾನ್ಯರೇ ಈ ಸಂಪೂರ್ಣ ವರದಿಯನ್ನು ಪರಿಶೀಲಿಸಿ ನನಗೆ ನ್ಯಾಯ ಒದಗಿಸಿಕೊಡಬೇಕೆಂದು ಮತ್ತು ನಷ್ಟ ಬರೆಸಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

**ಶ್ರೀ ಮಲ್ಲಿಕಾರ್ಜುನ ಡಿ ರೊಟ್ಟಿಗವಾಡ, ವಯಸ್ಸು-50, ದುಮ್ಮವಾಡ, ಗ್ರಾಹಕರು ಸ್ಥಾವರ ಸಂಖ್ಯೆ: DHC-36443 ರವರು ಈ ದಿನದ ವಿಚಾರಣೆಗೆ ಹಾಜರಾಗಿ ಮುಂದುವರೆದ ಲಿಖಿತ ಹೇಳಿಕೆಯನ್ನು ಈ ಕೆಳಗಿನಂತೆ ಸಲ್ಲಿಸಿರುತ್ತಾರೆ.**

1. ನಾನು ದಿನಾಂಕ:20.01.2018 ರಂದು ನಮ್ಮ ಸ್ಥಾವರದ ವಿದ್ಯುತ್ ಕಡಿತಗೊಳಿಸಿದ ಬಗ್ಗೆ ಮಾಹಿತಿ ನೀಡುವಂತೆ ಸ.ಕಾ.ನಿ.ಇಂ(ವಿ), ಕಾ ಮತ್ತು ಪಾ ಉಪವಿಭಾಗ, ಹೆಸ್ಕಾಂ, ಕಲಘಟಗಿರವರಿಗೆ ಇದರ ವಿಷಯವಾಗಿ ಯಾವುದೇ ಉತ್ತರವು ಬಂದಿರುವುದಿಲ್ಲ. ಪತ್ರದ ಪ್ರತಿಯನ್ನು ತಮ್ಮ ಅವಗಾಹಣೆಗಾಗಿ ಸಲ್ಲಿಸುತ್ತಿದ್ದೇನೆ.
2. ದಿನಾಂಕ:20.01.2018 ರಂದು ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ ಕಲಘಟಗಿ ಇರುವುದಾಗಿ ತಿಳಿದು ಅರ್ಜಿಯನ್ನು ಸ.ಕಾ.ನಿ.ಇಂ(ವಿ), ಕಾ ಮತ್ತು ಪಾ ಉಪವಿಭಾಗ, ಹೆಸ್ಕಾಂ, ಕಲಘಟಗಿರವರಿಗೆ ಸಲ್ಲಿಸಿರುತ್ತೇನೆ. ನಂತರದಲ್ಲಿ ಗ್ರಾಹಕರ ಕುಂದು ಕೊರತೆ ಹುಬ್ಬಳ್ಳಿಯಲ್ಲಿ ಇರುವುದಾಗಿ ಉಪ ವಿಭಾಗಾಧಿಕಾರಿಗಳು ತಿಳಿಸಿದ ಪ್ರಯುಕ್ತ ದಿನಾಂಕ:22.01.2018 ರಂದು ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ ಹುಬ್ಬಳ್ಳಿಯಲ್ಲಿ ದೂರನ್ನು ದಾಖಲಿಸಿರುತ್ತೇನೆ. ಪತ್ರದ ಪ್ರತಿಯನ್ನು ತಮ್ಮ ಅವಗಾಹಣೆಗಾಗಿ ಸಲ್ಲಿಸುತ್ತಿದ್ದೇನೆ.
3. ಹಾಲಿ ಇರುವ ನಮಗೆ ಸಂಬಂಧಪಟ್ಟ ಪರಿವರ್ತಕವನ್ನು 2018 ಇಸ್ವಿಯಲ್ಲಿ ಬದಲಾವಣೆ ಮಾಡಲಾಗಿರುತ್ತದೆ ಆದರೆ ತಿಂಗಳು ಮತ್ತು ದಿನಾಂಕ ನೆನಪಿರುವುದಿಲ್ಲ.
4. ನಮ್ಮ ಸ್ಥಾವರದ ವಿದ್ಯುತ್ ನಿಲುಗಡೆಗೆ ಹೆಸ್ಕಾಂ, ನವರು ದಿನಾಂಕ:31.05.2017 ರಂದು ಸಮಯ ಸಂಜೆ 5.30 ಗಂಟೆಗೆ ಬಂದಿದ್ದು, ಆಧರೆ ಇದಕ್ಕೆ ಪುರಾವೆ ನನ್ನಬಳಿ ಇರುವುದಿಲ್ಲ.

**ಸ್ಥಾವರ ಸಂಖ್ಯೆ: DHC-36443 ಶ್ರೀ ಮಲ್ಲಿಕಾರ್ಜುನ ಡಿ ರೊಟ್ಟಿಗವಾಡ ಇವರ ಪ್ರಕರಣಕ್ಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಉಪವಿಭಾಗ-1 ಹುಬ್ಬಳ್ಳಿರವರ ಲಿಖಿತ ಹೇಳಿಕೆ:**

ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯಡಿ ಶ್ರೀ ಮಲ್ಲಿಕಾರ್ಜುನ ಡಿ ರೊಟ್ಟಿಗವಾಡ ಸಾ|| ದುಮ್ಮವಾಡ ಇವರ ಒಡೆತನದ ವಿದ್ಯುತ್ ಸ್ಥಾವರ ಸಂಖ್ಯೆ: DHC-36443 ಕ್ಕೆ ಸಂಬಂಧಿಸಿದ ಆವರಣದಲ್ಲಿ ವಿದ್ಯುತ್ ಅವಗಡದಿಂದ ಯಂತ್ರೋಪಕರಣಗಳು ಹಾನಿಯಾಗಿರುವ ಕುರಿತು ದೂರು ನೀಡಿರುತ್ತಾರೆ. ಸದರಿ ಸ್ಥಾವರವನ್ನು ನಾನು ಸ್ಥಳ ಪರಿಶೀಲನೆ ಮಾಡಿದ್ದು, ಸದರಿ ವರದಿಯನ್ನು ತಮ್ಮ ದಯಾಪರ ಅವಗಾಹನೆಗಾಗಿ ಸಲ್ಲಿಸುತ್ತಿದ್ದೇನೆ.

.....5

ವಿದ್ಯುತ್ ಸ್ಥಾವರ ಸಂಖ್ಯೆ: DHC-36443 ಸ್ಥಾವರವನ್ನು ಪರಿಶೀಲನೆ ಮಾಡಿದಾಗ, ಸದರಿ ಸ್ಥಾವರ ಮತ್ತು ಸರ್ವಿಸ್ ವೈರ್‌ಗಳು ಸುರಕ್ಷಿತವಾಗಿರುವುದು ಕಂಡು ಬಂದಿದೆ. ಸಂಪರ್ಕ ದಿನಾಂಕದಿಂದ ಜೋಡಿಸಿದ ಮಾಪಕವನ್ನು ಬದಲಾವಣೆ ಮಾಡಿರುವುದಿಲ್ಲ. ಕೇಲವ ಗ್ರಾಹಕರ ಆವರಣದಲ್ಲಿರುವ ಯಂತ್ರೋಪಕರಣಗಳು ಸುಟ್ಟಿರುತ್ತವೆ ಎಂದು ಗ್ರಾಹಕರು ಹೇಳುತ್ತಿದ್ದಾರೆ. ಮಾಪಕದಿಂದ ಒಳ ಹೋಗಿರುವ ಮಾರ್ಗಕ್ಕೆ ಸಂಪರ್ಕದಲ್ಲಿರುವ ಯಂತ್ರೋಪಕರಣಗಳು ಸುಟ್ಟಿರುತ್ತದೆ ನಿಗಮ ಅಥವಾ ನಿಗಮದ ಸಿಬ್ಬಂದಿ ಹೊಣೆಗಾರರಾಗಿರುವುದಿಲ್ಲ. ಶಾಖಾಧಿಕಾರಿಗಳು ನೀಡಿದ ವರದಿ ಹಾಗೂ ಈ ಸ್ಥಾವರಕ್ಕೆ ಸಂಪರ್ಕ ದಿನಾಂಕದಿಂದ ಜೋಡಿಸಿರುವ ಮಾಪಕದ ವಿವರವನ್ನು ಮುಂದಿನ ವಿಚಾರಣೆ ದಿನಾಂಕದಂದು ವೇದಿಕೆಗೆ ಹಾಜರುಪಡಿಸುತ್ತೇನೆಂದು ವೇದಿಕೆಗೆ ವಿನಂತಿಸಿಕೊಳ್ಳುತ್ತೇನೆ.

**ಸ್ಥಾವರ ಸಂಖ್ಯೆ: DHC-36443 ಶ್ರೀ ಮಲ್ಲಿಕಾರ್ಜುನ ಡಿ ರೊಟ್ಟಿಗವಾಡ ಇವರ ಪ್ರಕರಣಕ್ಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಉಪವಿಭಾಗ-1 ಹುಬ್ಬಳ್ಳಿರವರ ಮುಂದುವರೆದ ಲಿಖಿತ ಹೇಳಿಕೆ:**

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ನಾನು ಹರ್ಷಾ ಬೆಂತೂರ, ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್(ವಿ),ಕಾ ಮತ್ತು ಪಾ ಉಪವಿಭಾಗ, ಹೆಸ್ಕಾಂ, ಕಲಘಟಗಿ. ಮಾನ್ಯ ವೇದಿಕೆಗೆ ತಿಳಿಪಡಿಸುವುದು ಏನೆಂದರೆ ಉಪವಿಭಾಗದ ದುಮ್ಮವಾಡ ಗ್ರಾಮ ಪಂಚಾಯತ ವ್ಯಾಪ್ತಿಯ ಸ್ಥಾವರ ಸಂಖ್ಯೆ: DHC-36443/DHAEH-29192 ಬಗ್ಗೆ ಗ್ರಾಹಕರು ಕೇಳಿದ ಮಾಹಿತಿಗನುಗುಣವಾಗಿ ರೂ 1,60,400/- ಗಳ ಮೌಲ್ಯದ ವಸ್ತುಗಳು ಹಾಳಾಗಿವೆ ಎಂದು ತಿಳಿಸಿರುತ್ತಾರೆ. ಆದರೆ ಗ್ರಾಹಕರು ಸದರಿ ಅವಗಡ ಆದ ತಕ್ಷಣ ನನಗೆ ಆಗಲೀ ಅಥವಾ ಶಾಖಾಧಿಕಾರಿಗಳಿಗೆ ಆಗಲಿ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲಾ. ಅಲ್ಲದೆ ಘಟನೆ ಬಗ್ಗೆ ವಿದ್ಯುತ್ ಇನಸ್ಪರೇಟ್ ಆಗಲೀ, ಅಥವಾ ಪೋಲೀಸ್ ಇಲಾಖೆಗೆ ಆಗಲಿ ಮಾಹಿತಿಯನ್ನು ತಿಳಿಸಿರುವುದಿಲ್ಲಾ. ಮುಖ್ಯವಾಗಿ ಇದುವರೆಗೂ ಹಾಳಾದ ವಸ್ತುಗಳನ್ನು ಕೂಡಾ ತೋರಿಸಿರುವುದಿಲ್ಲಾ. ಮುಖ್ಯವಾಗಿ ವೇದಿಕೆಯಲ್ಲಿ ತಿಳಿಸುವುದೇನೆಂದರೆ 31.05.2017 ಕ್ಕೆ ಸದರಿ ಸ್ಥಾವರಕ್ಕೆ ಬಾಕಿ ರೂ 23510/- ಗಳು ಇರುವುದನ್ನು ಗ್ರಾಹಕರು ತಮ್ಮ ಪತ್ರದಲ್ಲಾಗಲೀ ಅಥವಾ ವೇದಿಕೆಗೆ ನೀಡಿದ ದೂರಿನಲ್ಲಾಗಲೀ ಒಪ್ಪಿಕೊಂಡಿರುವುದಿಲ್ಲಾ. ಕಂಪನಿಯ ನಿಯಮಾನುಸಾರ ಒಮ್ಮೆ ಗ್ರಾಹಕರು ಚೆಕ್ ತಿರಸ್ಕೃತಗೊಂಡರೆ 3 ತಿಂಗಳವರೆಗೆ ಮರು ಚೆಕ್‌ನ್ನು ತೆಗೆದುಕೊಳ್ಳುವ ಹಾಗಿಲ್ಲಾ. ಸರಿಯಾಗಿ ನಿಗದಿತವಾಗಿ ಗ್ರಾಹಕನು ಪ್ರತಿ ತಿಂಗಳು ತನ್ನ ಬೇಡಿಕೆ ಮೊತ್ತವನ್ನು ಬಾಕಿ ಇಡದೆ ಪಾವತಿಸಿದ ಮೇಲೆ ಮರು ಚೆಕ್ಕನ್ನು ತೆಗೆದುಕೊಳ್ಳಬಹುದು.

ಸದರಿ ಗ್ರಾಹಕರು ಪ್ರತಿ ತಿಂಗಳು ಇರುವ ಮೊತ್ತವನ್ನು ಪಾವತಿಸುವ ಹೊಣೆಗಾರಿಕೆ ಅವರದ್ದೆ ಆಗಿರುತ್ತದೆ. ಅಲ್ಲದೇ 31.05.2017 ರ ಬಾಕಿ ಮೊತ್ತ ರೂ 23510/- ಪಾವತಿಸಬೇಕಿತ್ತು. ಅಲ್ಲದೇ ದಿನಾಂಕ:31.05.2017 ರಂದು ಶ್ರೀ ಬಿ.ಡಿ ಮೇಟಿ ಗ್ರಾಹಕರ ಸ್ಥಾವರಕ್ಕೆ ಹೋದಾಗ ನನಗೆ ಅವರ ಕೌಂಪೊಂಡ ಒಳಗಡೆ ಬರಲು ಬಿಡಲಿಲ್ಲ ಎಂದು ತಿಳಿಸಿರುತ್ತಾರೆ. ಆದ್ದರಿಂದ ಶಾಖಾಧಿಕಾರಿಗಳ ಆದೇಶದ ಮೇರೆಗೆ ಸದರಿ ಸ್ಥಾವರಗಳಿಗೆ ಸದರಿ ಸ್ಥಾವರಗಳಿಗೆ ಇರುವ ಪ್ರತ್ಯೇಕ ಇರುವ 25 ಕೆವಿಯ ವಿದ್ಯುತ್ ಪರಿವರ್ತಕದ 3 ಸೇಕ್ಷನಗಳನ್ನು ತೆಗೆದು ಹಾಕಿರುತ್ತೇನೆ ಎಂದು ತಿಳಿಸಿರುತ್ತಾರೆ. ಅಲ್ಲದೇ ರೀಡಿಂಗ್ ಬಗ್ಗೆ ಗ್ರಾಹಕರು ಆಕ್ಷೇಪಣೆ ವ್ಯಕ್ತ ಪಡಿಸಿರುತ್ತಾರೆ ಅದು ರೀಡಿಂಗ್ ಹೇಗೆ ಬಂದಿದಿಯೋ ಹಾಗೆ ನೀಡಲಾಗಿದೆ. ಸದರಿ ಸ್ಥಾವರಕ್ಕೆ ಹೊಸ ಮಾಪಕವನ್ನು ದಿನಾಂಕ:19.10.2016 ರಂದು ಕ್ರಮ ಸಂಖ್ಯೆ:117578 ಪ್ರಾರಂಭ ಗುಣಾಂಕ 000005 ಇರುತ್ತದೆ ಮೇಲ ಹೇಳಿಕೆ ನೀಡಿದ ನಮ್ಮ ನೌಕರರು ಮತ್ತು ಶಾಖಾಧಿಕಾರಿಗಳು ನೀಡಿದ ಮಾಹಿತಿ ಸತ್ಯವಿರುತ್ತದೆ ಸದರಿ ಪ್ರಕರಣದಲ್ಲಿ ಯಾವುದೇ ಕಂಪನಿಯ ನಿಯಮವನ್ನು ಮೀರಿ ಕ್ರಮ ಕೈಗೊಂಡಿರುವುದಿಲ್ಲಾ ಹಾಗೂ ಜೂನ-2017 ರಿಂದ ಸೆಪ್ಟಂಬರ್-2018 ರವರೆಗೂ ಯಾವುದೇ ಪ್ರತಿ ಮಾಹೆಯ ಬಳಕೆಯ ಹಣವನ್ನು ಪಾವತಿಸದೇ ಇರುತ್ತಾರೆ ಅಲ್ಲದೇ ಸೆಪ್ಟಂಬರ್-2018 ರ ಅಂತ್ಯಕ್ಕೆ ರೂ 1,26,576/- ಗಳು ಬಾಕಿ ಇದೆ ಎಂದು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

.....6

**ಸ್ಥಾವರ ಸಂಖ್ಯೆ: DHC-36443 ಶ್ರೀ ಮಲ್ಲಿಕಾರ್ಜುನ ಡಿ ರೊಟ್ಟಿಗವಾಡ ಇವರ ಪ್ರಕರಣಕ್ಕೆ ಬಸಪ್ಪ ದ್ಯಾಮಣ್ಣಾ ಮೇಟಿ, ಲೈನ್ ಮೆಕ್ಯಾನಿಕ್ ಗ್ರೇಡ್-2 ದುಮ್ಮವಾಡ ಶಾಖೆ, ಹೆಸ್ಕಾಂ, ಕಲಘಟಗಿರವರ ಲಿಖಿತ ಹೇಳಿಕೆ:**

ವಿಷಯ: ಆರ್ ಆರ್ ನಂ:DHC-36443 ಯ ಹೇಳಿಕೆ ಕೊಡುವ ಕುರಿತು.
ಉಲ್ಲೇಖ:1. ತಮ್ಮ ಕಛೇರಿ ಪತ್ರ ಸಂಖ್ಯೆ:796, ದಿನಾಂಕ:15.09.2018.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ನಾನು ಬಸಪ್ಪ ದ್ಯಾಮಣ್ಣಾ ಮೇಟಿ. ಲೈನ್ ಮೆಕ್ಯಾನಿಕ್ ಗ್ರೇಡ್-2,ಕಳೆದ 8 ತಿಂಗಳುಗಳಿಂದ ಸೇವೆ ದುಮ್ಮವಾಡ ಶಾಖೆ, ಹೆಸ್ಕಾಂ, ದುಮ್ಮವಾಡ ಮಾನ್ಯ ವೇದಿಕೆಗೆ ತಿಳಿಪಡಿಸುವುದು ಏನೆಂದರೆ ಉಪವಿಭಾಗದ ದುಮ್ಮವಾಡ ಗ್ರಾಮ ಪಂಚಾಯತ ವ್ಯಾಪ್ತಿಯ ಸ್ಥಾವರ ಸಂಖ್ಯೆ: DHC-36443/DHAEH-29192 ಯನ್ನು ಮಾನ್ಯ ಶಾಖಾಧಿಕಾರಿಗಳ ಆದೇಶದ ಮೇರೆಗೆ ಈ ಎರಡು ಸ್ಥಾವರಗಳು ದಿನಾಂಕ:31.05.2017 ರ ಅಂತ್ಯಕ್ಕೆ ರೂ 23510/ರೂ 470 ಗಳ ಬಾಕಿ ಇರುವುದರಿಂದ ವಿದ್ಯುತ್ ನಿಲುಗಡೆ ಮಾಡಲು ತಿಳಿಸಿರುತ್ತಾರೆ. ಅದರಂತೆ 31.05.2017 ರಂದು ವೇಳೆ 2:30 ರಿಂದ 3:15 ಮಧ್ಯದಲ್ಲಿ ಸ್ಥಾವರದ ಸ್ಥಳಕ್ಕೆ ಹೋದಾಗ ಗ್ರಾಹಕರಿಗೆ ಸದರಿ ಬಾಕಿ ಇದ್ದ ಮಾಹಿತಿಯನ್ನು ತಿಳಿಸಲಾಗಿ ಗ್ರಾಹಕರು ನಾವು ನಾಳೆ ಪಾವತಿಸುತ್ತೇವೆ ಎಂದು ಹೇಳಿದಾಗ ನಾನು ಶಾಖಾಧಿಕಾರಿ ದುಮ್ಮವಾಡರವರಿಗೆ ಮೊಬೈಲ್ ಮುಖಾಂತರ ಸಂಪರ್ಕಿಸಿದಾಗ ವಿದ್ಯುತ್‌ನ್ನು ನಿಲುಗಡೆಗೊಳಿಸಿರಿ ಎಂದು ಸೂಚನೆ ನೀಡಿದರು, ಸದರಿ ಸಮಯದಲ್ಲಿ ಗ್ರಾಹಕರು ತಮ್ಮ ಕೌಂಪೋಂಡ ಒಳಗಡೆ ಬೀಡದೆ ಇರುವ ಕಾರಣ ನನಗೆ ಮಾಪಕದ ಹತ್ತಿರ ಡಿಸ್ ಕನೆಕ್ಷನ್ ಮಾಡಲು ಮತ್ತು ಮಾಪಕದ ರೀಡಿಂಗ್ ತೆಗೆದುಕೊಳ್ಳಲು ಅವಕಾಶ ದೊರೆಯದ ಕಾರಣ ಸದರಿ ಸ್ಥಾವರಕ್ಕೆ ಮಾತ್ರ ಇರುವ 25 ಕೆವಿಯ ವಿದ್ಯುತ್ ಪರಿವರ್ತಕದ 3 ಸೇಕ್ಷನ್‌ಗಳನ್ನು ತೆಗೆದು ಸ್ಥಾವರಕ್ಕೆ ಇರುವ ವಿದ್ಯುತ್‌ನ್ನು ನಿಲುಗಡೆಗೊಳಿಸಲಾಯಿತು. ಸದರಿ ಸ್ಥಾವರವನ್ನು ಮರಳಿ ದಿನಾಂಕ:01.06.2017 ರಂದು ಬೆಳಗ್ಗೆ 11.00 ಗಂಟೆಗೆ ಪುನ: ಮರು ಜೋಡಣೆ ಮಾಡಿ ಸ್ಥಾವರಕ್ಕೆ ವಿದ್ಯುತ್ ಸಂಪರ್ಕಗೊಳಿಸಲಾಯಿತು. ಅದೇ ಕಾಲಕ್ಕೆ ಉಪವಿಭಾಗದಲ್ಲಿ ದೇವಿಕೊಪ್ಪ ಗ್ರಾಮದ ಜನರು ದಾಂದಲೇ ಮಾಡಿ ಉಪವಿಭಾಗದ ಎಲ್ಲ ಪೀಠೋಪಕರಣಗಳು ಕಂಪ್ಯೂಟರಗಳು ಮತ್ತು ಕಛೇರಿ ಬೆಂಕಿ ಹಚ್ಚಿ ಹೋದ ಕಾರಣ ದಿನಾಂಕ:14.06.2017 ರಂದು ಸದರಿ 23510 ರೂಗಳನ್ನು ಪಾವತಿಸಿಕೊಂಡು ರಶೀದಿ ನೀಡಲಾಯಿತು.

ಮುಂದುವರೆದು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ನಾನು ಪರಿವರ್ತಕದ ಮೂಲಕ ವಿದ್ಯುತ್ ನಿಲುಗಡೆಗೊಳಿಸಿದ ನಂತರ ಗ್ರಾಹಕರೆ ಅದನ್ನು ಚಾಲು ಮಾಡಿಕೊಳ್ಳಲು ಹೋಗಿರಬೇಕೆಂದು ನಾನು ಆಊಂಇಊ-29192 ಅಂದಾಜುಸುತ್ತೇನೆ. ಆದ ಕಾರಣ ಈ ದುರ್ಘಟನೆ ನಡೆದಿದೆ ಎಂದು ಹೇಳಬಹುದಾಗಿದೆ. ಅಲ್ಲದೇ ಸದರಿ ಪರಿವರ್ತಕದ ಮೇಲೆ ಇನ್ನೊಂದು ಸ್ಥಾವರವಿದ್ದು, ಅದರ ಬಗ್ಗೆ ಗ್ರಾಹಕರ ಯಾವುದೇ ಆಕ್ಷೇಪಣೆ ಇರುವುದಿಲ್ಲ. ಆದ ಕಾರಣ ಇದರಲ್ಲಿ ಕಂಪನಿಯ ಕಾನೂನಿನ ಪ್ರಕಾರ ನಾನು ಕೆಲಸ ನಿರ್ವಹಿಸಿರುತ್ತೆನೆ ನನ್ನ ತಪ್ಪು ಏನು ಇರುವುದಿಲ್ಲಾ ಎಂದು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಸ್ಥಾವರ ಸಂಖ್ಯೆ: DHC-36443 ಶ್ರೀ ಮಲ್ಲಿಕಾರ್ಜುನ ಡಿ ರೊಟ್ಟಿಗವಾಡ ಇವರ ಪ್ರಕರಣಕ್ಕೆ ಬಾಬಾಜಾನ ಎಂ ಬೆಂಗಳೂರಿ ಲೈನ್ ಮೆಕ್ಯಾನಿಕ್ ಗ್ರೇಡ್-2 ದುಮ್ಮವಾಡ ಶಾಖೆ, ಹೆಸ್ಕಾಂ, ಕಲಘಟಗಿರವರ ಲಿಖಿತ ಹೇಳಿಕೆ:**

ವಿಷಯ: ಆರ್ ಆರ್ ನಂ:DHC-36443 ಯ ಹೇಳಿಕೆ ಕೊಡುವ ಕುರಿತು.
ಉಲ್ಲೇಖ:1. ತಮ್ಮ ಕಛೇರಿ ಪತ್ರ ಸಂಖ್ಯೆ:796, ದಿನಾಂಕ:15.09.2018.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ನಾನು ಬಾಬಾಜಾನ ಎಂ ಬೆಂಗಳೂರಿ, ಪ್ರಭಾರಿ ಶಾಖಾಧಿಕಾರಿ(02/2017 ರಿಂದ 10/2017 ರವರೆಗೆ) (ಸದ್ಯಕ್ಕೆ ಕಿರಿಯ ಮಾಪಕ ಓದುಗ, ಹುಬ್ಬಳ್ಳಿ). ದುಮ್ಮವಾಡ ಶಾಖೆ, ಹೆಸ್ಕಾಂ, ದುಮ್ಮವಾಡ ಮಾನ್ಯ ವೇದಿಕೆಗೆ ತಿಳಿಪಡಿಸುವುದು ಏನೆಂದರೆ ಉಪವಿಭಾಗದ ದುಮ್ಮವಾಡ ಗ್ರಾಮ ಪಂಚಾಯತ ವ್ಯಾಪ್ತಿಯ

ಸ್ಥಾವರ ಸಂಖ್ಯೆ: DHC-36443/DHAEH-29192 ಯನ್ನು ಮಾನ್ಯ ಉಪವಿಭಾಗದ ಆದೇಶದ ಮೇರೆಗೆ ಈ ಎರಡು ಸ್ಥಾವರಗಳು ದಿನಾಂಕ:31.05.2017 ರ ಅಂತ್ಯಕ್ಕೆ 23510/470 ಬಾಕಿ ಇರುವುದರಿಂದ ವಿದ್ಯುತ್ ನಿಲುಗಡೆ ಮಾಡಲು ತಿಳಿಸಿರುತ್ತೇನೆ. ಅದರಂತೆ 31.05.2017 ರಂದು ವೇಳೆ 2:30 ರಿಂದ 3:15 ಮಧ್ಯದಲ್ಲಿ

.....7

ಸ್ಥಾವರದ ಸ್ಥಳಕ್ಕೆ ಹೋದಾಗ ಗ್ರಾಹಕರಿಗೆ ಸದರಿ ಬಾಕಿ ಇದ್ದ ಮಾಹಿತಿಯನ್ನು ತಿಳಿಸಲಾಗಿ ಗ್ರಾಹಕರು ನಾವು ನಾಳೆ ಪಾವತಿಸುತ್ತೇವೆ ಎಂದು ಸದರಿ ಸಮಯದಲ್ಲಿ ಗ್ರಾಹಕರು ತಮ್ಮ ಕೌಂಪೋಂಡ ಒಳಗಡೆ ಬಿಡದೇ ಇರುವ ಕಾರಣ ನನಗೆ ಮಾಪಕದ ಹತ್ತಿರ ಡಿಸ್ ಕನೇಕ್ಷನ್ ಮಾಡಲು ಮತ್ತು ಮಾಪಕದ ರೀಡಿಂಗ್ ತೆಗೆದುಕೊಳ್ಳಲು ಅವಕಾಶ ದೊರೆಯುತ್ತಿಲ್ಲಾ ಎಂದು ನಮ್ಮ ಲೈನ್ ಮೆಕ್ಯಾನಿಕ್ ಗ್ರೇಡ-2 ರವರು ಮೊಬೈಲ್ ಮುಖಾಂತರ ನನಗೆ ತಿಳಿಸಿದಾಗ ನಾನು ಸದರಿ ಸ್ಥಾವರಕ್ಕೆ ಪ್ರತ್ಯೇಕ ಇರುವ 25 ಕೆವಿಯ ವಿದ್ಯುತ್ ಪರಿವರ್ತಕದ 3 ಸೇಕ್ಷನ್‌ಗಳನ್ನು ತೆಗೆದು ವಿದ್ಯುತ್ ನಿಲುಗಡೆಗೊಳಿಸಿರಿ ಎಂದು ತಿಳಿಸಿರುತ್ತೇನೆ. ಸದರಿ ಸ್ಥಾವರಕ್ಕೆ ಪ್ರತ್ಯೇಕ ಇರುವ 25 ಕೆವಿಯ ವಿದ್ಯುತ್ ಪರಿವರ್ತಕದ 3 ಸೆಕ್ಷನಗಳನ್ನು ತೆಗೆದು ಸ್ಥಾವರಕ್ಕೆ ಇರುವ ವಿದ್ಯುತನ್ನು ನಿಲುಗಡೆಗೊಳಿಸಲಾಯಿತು. ಸದರಿ ಸ್ಥಾವರವನ್ನು ಮರಳಿ ದಿನಾಂಕ:01.06.2017 ರಂದು ಪುನ: ಮರು ಜೋಡಣೆ ಮಾಡಿ ಸ್ಥಾವರಕ್ಕೆ ವಿದ್ಯುತ್ ಸಂಪರ್ಕಗೊಳಿಸಲಾಯಿತು. ಅದೇ ಕಾಲಕ್ಕೆ ಉಪವಿಭಾಗದಲ್ಲಿ ದೇವಿಕೊಪ್ಪ ಗ್ರಾಮದ

## <u>ಸ್ಥಾವರ ಸಂಖ್ಯೆ: DHC-36443 ಶ್ರೀ ಮಲ್ಲಿಕಾರ್ಜುನ ಡಿ ರೊಟ್ಟಿಗವಾಡ ಇವರ ಪ್ರಕರಣಕ್ಕೆ ಕೆಂಪಣ್ಣಾ ಎಲ್ ನಾಯಕ, ಆಗಿನ ಶಾಖಾಧಿಕಾರಿ, ದುಮ್ಮವಾಡ ಶಾಖೆ, ಹೆಸ್ಕಾಂ, ಕಲಘಟಗಿರವರ ಲಿಖಿತ ಹೇಳಿಕೆ:</u>

ವಿಷಯ: ಆರ್ ಆರ್ ನಂ:DHC-36443 ಯ ಹೇಳಿಕೆ ಕೊಡುವ ಕುರಿತು.
ಉಲ್ಲೇಖ:1. ತಮ್ಮ ಕಛೇರಿ ಪತ್ರ ಸಂಖ್ಯೆ:796, ದಿನಾಂಕ:15.09.2018.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ನಾನು ಕೆಂಪಣ್ಣಾ ಎಲ್ ನಾಯಕ, ಶಾಖಾಧಿಕಾರಿಗಳು ದುಮ್ಮವಾಡ ಶಾಖೆ, ಹೆಸ್ಕಾಂ, ಕಲಘಟಗಿ. ಮಾನ್ಯ ವೇದಿಕೆಗೆ ತಿಳಿಪಡಿಸುವುದು ಏನೆಂದರೆ ಉಪವಿಭಾಗದ ದುಮ್ಮವಾಡ ಗ್ರಾಮ ಪಂಚಾಯತ ವ್ಯಾಪ್ತಿಯ ಸ್ಥಾವರ ಸಂಖ್ಯೆ: DHC-36443/DHAEH-29192 ಬಗ್ಗೆ ವೇದಿಕೆಗೆ ವಿನಂತಿಸುವುದು ನಾನು ಸದರಿ ವೇಳೆಯಲ್ಲಿ ಮಿಶ್ರಿಕೋಟಿ ಶಾಖೆಗೆ ಶಾಖಾಧಿಕಾರಿಯಾಗಿದ್ದು, ಈ ಮೇಲೆ ತಿಳಿಸಿದ ಎರಡು ನೌಕರರ ಹೇಳಿಕೆಗೆ ಅನುಸಾರವಾಗಿ ಅದು ಸತ್ಯವಿರುತ್ತದೆ ಎಂದು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

## <u>ಪ್ರಕರಣದ ಸಾರಾಂಶದ ಮೇಲೆ ವೇದಿಕೆಯ ಅಭಿಪ್ರಾಯ:</u>

ಸದರ ಪ್ರಕರಣದಲ್ಲಿ ಗ್ರಾಹಕರ ಹೇಳಿಕೆ ಹಾಗೂ ಕಂಪನಿ ಅಧಿಕಾರಿಗಳ ಹೇಳಿಕೆ ಮತ್ತು ಕಡತದಲ್ಲಿಯ ಕಾಗದ ಪತ್ರಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಮಾಹಿತಿ ಕಂಡು ಬರುತ್ತದೆ.

1. ಗ್ರಾಹಕರು ಸುಟ್ಟುಹೋಗಿದ್ದಾವೆ ಎಂದು ತಿಳಿಸಿರುವ ಉಪಕರಣಗಳ ಬಗ್ಗೆ ಯಾವುದೇ ಛಾಯಾ ಚಿತ್ರವಾಗಲಿ, ವಿಡಿಯೋ ತುಣುಕುಗಳನ್ನಾಗಲಿ ವೇದಿಕೆಗೆ ಸಲ್ಲಿಸಿರುವುದಿಲ್ಲ.
2. ಗ್ರಾಹಕರ ಲಿಖಿತ ಹೇಳಿಕೆಯಲ್ಲಿ ತಿಳಿಸಿದ ಉಪಕರಣಗಳು ಸ್ಥಾವರದ ಆವರಣದಲ್ಲಿ ಇರುವ ಕುರಿತು ಛಾಯಾ ಚಿತ್ರವಾಗಲಿ, ವಿಡಿಯೋ ತುಣಕುಗಳನ್ನಾಗಲಿ ಈ ಉಪಕರಣಗಳನ್ನು ಖರೀದಿಸಿರುವ ಬಗ್ಗೆ ರಶೀದಿಗಳನ್ನಾಗಲಿ ವೇದಿಕೆಗೆ ಸಲ್ಲಿಸಿರುವುದಿಲ್ಲ.
3. ಈ ವಿದ್ಯುತ್ ಸ್ಥಾವರಕ್ಕೆ ಸಂಬಂಧಪಟ್ಟ ಸರ್ವಿಸ್ ಮೇನ್ ಆಗಲಿ, ವಿದ್ಯುತ್ ಮಾಪಕವಾಗಲಿ ಸುಡದೇ ಇರುವ ಬಗ್ಗೆ ಲೈಸನ್ಸುದಾರರು ವೇದಿಕೆಗೆ ತಿಳಿಸಿರುತ್ತಾರೆ.

.....8

4. ಗ್ರಾಹಕರು ತಮ್ಮ ಹೇಳಿಕೆಯಲ್ಲಿ ಸುಟ್ಟು ಹೋಗಿದ್ದ ಉಪಕರಣಗಳನ್ನು ರಿಪೇರಿ ಮಾಡಿಸಿದ್ದೇನೆ ಎಂದು ತಿಳಿಸಿದ್ದು, ಇದಕ್ಕೆ ಪುರಾವೆಯಾಗಿ ಯಾವುದೇ ದಾಖಲೆಗಳನ್ನು ವೇದಿಕೆಗೆ ಸಲ್ಲಿಸಿರುವುದಿಲ್ಲ.
5. ಈ ಮೇಲಿನ ಎಲ್ಲಾ ಕಾರಣಗಳಿಂದಾಗಿ, ಸ್ಥಾವರದ ಆವರಣದಲ್ಲಿದ್ದ ಗ್ರಾಹಕರ ಉಪಕರಣಗಳು ಹೆಸ್ಕಾಂ, ವಿದ್ಯುಚ್ಛಕ್ತಿ ಅವಘಡದಿಂದಾಗಿ ಸುಟ್ಟುಹೋಗಿದ್ದಾವೆ ಎಂಬುವುದನ್ನು ಖಾತರಿ ಪಡಿಸುವಲ್ಲಿ ಗ್ರಾಹಕರು ವಿಫಲರಾಗಿದ್ದಾರೆ.

ಈ ಮೇಲಿನ ಅಂಶಗಳಿಂದಾಗಿ ಗ್ರಾಹಕರ ಮನವಿಯನ್ನು ಪರಿಗಣಿಸಲು ಬರುವುದಿಲ್ಲ.

**ಆದೇಶ ಸಂಖ್ಯೆ:ಅಇಂ(ವಿ)/ಉಲೆನಿ/ಹಿಸ-1/ಗ್ರಾಕುಂಕೊನಿವೇ/ಕಡತ-232/** Cys.1055 **ದಿನಾಂಕ:** 24 NOV 2018

ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಆದೇಶ ಸಂಖ್ಯೆ ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/13-14/ಸಿವೈಎಸ್-769 ದಿ.16.07.2013 ರನ್ವಯ ಮತ್ತು ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/16-17/ಸಿವೈಎಸ್-3851 ದಿ.28.01.2017 ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

1. ಗ್ರಾಹಕರ ಮನವಿಯನ್ನು ಪುರಸ್ಕರಿಸಲಾಗಿಲ್ಲ.

| | | |
|---|---|---|
| **(ರಾಮಪ್ಪ ಎನ್ ಎನ್)** | **(ಲೀಲಾ ಆರ್ ಹಿರೇಮಠ)** | **(ಎಮ್. ಆರ್. ಶಾನಭಾಗ)** |
| ಉಪಲೆಕ್ಕ ನಿಯಂತ್ರಣಾಧಿಕಾರಿ ಹಾಗೂ ಗ್ರಾಕುಂಕೊನಿವೇ ಸದಸ್ಯರು ಕಾ ಮತ್ತು ಪಾ ವೃತ್ತ, ಹುಬ್ಬಳ್ಳಿ | ಆಯೋಗದಿಂದ ನಿಯೋಜಿಸಲಾದ ಸದಸ್ಯರು. | ಅಧೀಕ್ಷಕ ಇಂಜಿನೀಯರ(ವಿ) ಕಾ & ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ ಹಾಗೂ ಅಧ್ಯಕ್ಷರು, ಧಾರವಾಡ ಜಿಲ್ಲೆ ಗ್ರಾ.ಕುಂ.ಕೊ.ನಿ.ವೇದಿಕೆ. |

ಗೆ,

ಶ್ರೀ ಮಲ್ಲಿಕಾರ್ಜುನ.ದೋ.ರೊಟ್ಟಿಗವಾಡ,
(R R No : DHC-36443)
ಹೊಟೇಲ್ ಬೊಟಾನಿಕಲ್ ಗಾರ್ಡನ್,
ನೀರ್‌ಸಾಗರ ಕ್ರಾಸ್, ದುಮ್ಮವಾಡ, ತಾ॥ಕಲಘಟಗಿ.

**"ನೊಂದಣಿ ಅಂಚೆ ಮೂಲಕ"**

**ಪ್ರತಿ:**

1. ಮುಖ್ಯ ಇಂಜಿನೀಯರ(ವಿ), ಹುಬ್ಬಳ್ಳಿ ವಲಯ, ಹುವಿಸಕಂನಿ., ಕೇಶ್ವಾಪುರ, ಹುಬ್ಬಳ್ಳಿ-23 ಇವರ ದಯಾಪರ ಮಾಹಿತಿಗಾಗಿ.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕಂಪನಿ ಕಛೇರಿ, ಹುವಿಸಕಂನಿ, ಹುಬ್ಬಳ್ಳಿರವರ ಆದರ ಪೂರ್ವಕ ಮಾಹಿತಿಗಾಗಿ
3. ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಗ್ರಾಮೀಣ ವಿಭಾಗ, ಹುವಿಸಕಂನಿ., ಧಾರವಾಡ ಇವರಿಗೆ ಮಾಹಿತಿಗಾಗಿ. ಸೂಕ್ತ ಕ್ರಮಕ್ಕಾಗಿ.
4. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಉಪ ವಿಭಾಗ, ಹುವಿಸಕಂನಿ., ಕಲಘಟಗಿ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಮಹಾ ಕಡತ